ಸಾಕ್ಷಿಯನ್ನು ದಿ: 19.06.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀಸವಾಲುಃ- ಪ್ರತಿವಾದಿ ಪರ ವಕೀಲರಿಂದ:-**

1. ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ನಾನು ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮದುವೆಯಾಗಿ ಸುಮಾರು 26 ವರ್ಷಗಳು ಆಗಿರುತ್ತದೆ. ನಾನು ಮದುವೆ ಆದಾಗಿನಿಂದ ನನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತೇನೆ ಎಂದರೆ ಸರಿ. ನಾನು ಮದುವೆ ಆಗಿ ಗಂಡನ ಮನೆಯಲ್ಲಿ ಇದ್ದ ಕಾರಣ ಪ್ರತಿವಾದಿ ಮನೆಯ ವ್ಯವಹಾರ ಗೊತ್ತಿಲ್ಲ ಎಂದರೆ ಸರಿ. ನನ್ನ ತಂದೆ ಆಸ್ತಿಯನ್ನು ಪ್ರತಿವಾದಿ ಮೋಸ ಮಾಡಿ ಬರೆಸಿಕೊಂಡ ಕಾರಣ ಈ ದಾವೆ ದಾಖಲು ಮಾಡಿರುತ್ತೇನೆ. ಸದರ ಆಸ್ತಿ ಸರ್ವೆ ನಂಬರ ಮತ್ತು ಚೆಕ್ ಬಂದಿ ಗೊತ್ತಿಲ್ಲ. ದಾವಾ ಆಸ್ತಿ ಗೌಡಗೇರಿ ವಾಪ್ತಿಯಲ್ಲಿ ಬರುತ್ತದೆ. ಪ್ರತಿವಾದಿ ತನ್ನ ತಕಾರಾರಿನಲ್ಲಿ ಯಾವ ಸಂಗತಿಗಳನ್ನು ತಿಳಿಸಿರುತ್ತಾನೆ ಗೊತ್ತಿಲ್ಲ. ಭೈರಿದೇವರಕೊಪ್ಪದ ನನ್ನ ಪಿತ್ರಾರ್ಜಿತ ಆಸ್ತಿಯ ಸಂಖ್ಯೇ ಚೆಕ ಬಂದಿ ಗೊತ್ತಿಲ್ಲ. ನನ್ನ ತಂದೆ ವ್ಯವಸಾಯದಿಂದ ಮಾತ್ರ ಆದಾಯ ಹೊಂದಿದ್ದರು. ವ್ಯವಸಾಯ ಹೊರತು ಪಡಿಸಿ ನನ್ನ ತಂದೆಗೆ ಬೇರೆ ಯಾವುದೇ ಆದಾಯ ಇರಲಿಲ್ಲ. ನನ್ನ ತಂದೆ ನಮ್ಮ ಕುಟುಂಬದ ಅಡಚಣೆಗೆ ಮತ್ತು ನಮ್ಮ ಮದುವೆಗಾಗಿ ಸಾಲ ಮಾಡಿದ್ದರೂ ಎಂದರೆ ಸರಿಯಲ್ಲ. ಮನೆತನದ ಸಾಲ ತೀರಿಸಲು ನನ್ನ ತಂದೆ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸಾಲ ತೀರಿಸಿ ತಲಾ 5 ಲಕ್ಷ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು 3 ಲಕ್ಷ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಪ್ರತಿವಾದಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿ ನನ್ನ ತಂದೆ ತಾಯಿಯನ್ನು ನೋಡಿಕೊಂಡು ನಮ್ಮ ಕುಟುಂಬದ ಮನೆಯಲ್ಲಿ ವಾಸ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಭೈರಿದೇವರಕೊಪ್ಪದ ಆಸ್ತಿ ಮಾರಾಟ ಮಾಡಿ ನನ್ನ ತಂದೆ ನಮ್ಮೆಲ್ಲರಿಗೂ ಹಣ ಕೊಟ್ಟು ಉಳಿದ ಹಣದಲ್ಲಿ ಗೌಡಗೇರಿಯಲ್ಲಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಹಾಗೂ ನನ್ನ ತಂದೆ ತಾಯಿ ಮೂರು ಜನ ಸೇರಿ ದಾವಾ ಆಸ್ತಿಯನ್ನು ವಾಟ್ನೀ ಪತ್ರದ ಮೂಲಕ ಹಿಸ್ಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು**.

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ

**Sd/-**

**C/c ದಿವಾನಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ ದಂ.ಗಳು**

**ಕುಂದಗೋಳ.**